> ಕನ್ನಡ ಭಾಷಾಂತರ ಸಾಹಿತ್ಯ ಸಮೃದ್ಧವಾಗಿದೆ. ಆದರಿಂದ ಕನ್ನಡ ಸಾಹಿತ್ಯ ಶ್ರೀಮಂತವೂ ಆಗಿದೆ. ಈಗ ಕನ್ನಡ ಭಾಷಾಂತರಕಾರರ ಕೋಶ ಹಾಗೂ ಭಾಷಾಂತರ ಚರಿತ್ರೆಯನ್ನು ಸಿದ್ಧಪಡಿಸಬೇಕು.

**6**

ನೇರವಾಗಿ ಮೂಲ ಭಾಷೆಯಿಂದ ಅನುವಾದ ಮಾಡುವವರೇ ಸಿಗದಿದ್ದಾಗ 'ಅನುವಾದದ ಅನುವಾದ'ಕ್ಕೆ ಮೊರೆ ಹೋಗದೇ ಅನ್ಯಮಾರ್ಗವಿಲ್ಲ. ಆಗ ಆ ಕೃತಿಯ ಅನುಭವ ಮಸುಕಾಗುತ್ತದೆ. ಎಂ.ಎಂ. ಕಲಬುರ್ಗಿಯವರು ಆದಿಲ್‌ಶಾಹಿ ಕಾಲದ ಸಾಹಿತ್ಯವನ್ನು ಕನ್ನಡಕ್ಕೆ ತರುವ ಮಹತ್ವದ ಕಾರ್ಯವನ್ನು ಅನುವಾದಕರಿಂದ ಮಾಡಿಸುತ್ತಿದ್ದರು. ನನಗೆ 'ಆದಿಲ್‌ಶಾಹಿಯ ಕೈಫಿಯತ್'ನ್ನು ಮರಾಠಿಯಿಂದ ಕನ್ನಡಕ್ಕೆ ಭಾಷಾಂತರಿಸುವಂತೆ ತಿಳಿಸಿದರು. ಅದರ ಮೂಲ ಫಾರ್ಸಿ, ಉರ್ದುವಿನಲ್ಲಿದೆ. ಈ ಭಾಷೆಯ ಅನುವಾದಕರು ತೀರ ಕಡಿಮೆ. ಹಾಗಾಗಿ, ಅದನ್ನು ಮಾಡದೇ ಹಾಗೇ ಬಿಡುವುದಕ್ಕಿಂತ ಅನುವಾದದ ಅನುವಾದ ಮಾಡಲು ಸೂಚಿಸಿದರು. ಅನಿವಾರ್ಯ ಕಾರಣಗಳಿಂದಾಗಿ ಈ ಮಾರ್ಗ ಹಿಡಿಯಬೇಕಾಗುತ್ತದೆ.

**7**

ಎಸ್. ನಟರಾಜ ಬೂದಾಳರ 'ಸರಹಪಾದ'ನ ದ್ವಿಪದಿಗಳು ಹಾಗೂ ಜಗದೀಶ ಕೊಪ್ಪ ಅವರು ಅನುವಾದಿಸಿದ ಡಾ. ಅಂಬೇಡ್ಕರರ 'ಬುದ್ಧ ಮತ್ತು ಅವನ ಧಮ್ಮ' ನನ್ನ ಗಮನ ಸೆಳೆದವು. ನಟರಾಜ ಅವರು ಸರಹಪಾದನ ದೋಹೆಗಳನ್ನು ಭಾಷಾಂತರಿಸುವಾಗ ತುಂಬಾ ಶ್ರಮಪಟ್ಟಿರುವುದನ್ನು ಆ ಕೃತಿಯ ಬರಹದಲ್ಲೇ ಗುರುತಿಸಬಹುದು. ಅಪಭ್ರಂಶ(ದೇವನಾಗರಿ)ದಿಂದ ಕನ್ನಡಕ್ಕೆ ತರ್ಜುಮೆ ಮಾಡುವಾಗ ಸಂಸ್ಕೃತ, ಹಿಂದಿ, ಇಂಗ್ಲಿಷ್ ಪಠ್ಯಗಳನ್ನು ತೌಲನಿಕವಾಗಿ ಹೋಲಿಸಿ ಪರಾಂಬರಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವೆಂದರೆ, ಕನ್ನಡದ ಅಲ್ಲಮನ ವಚನಗಳನ್ನು ಸರಹಪಾದನ ಪಠ್ಯದ ಜೊತೆಗಿಟ್ಟು ಅಧ್ಯಯನ ಮಾಡಿ, ಸಾಮ್ಯವನ್ನು ಗುರುತಿಸಿದ್ದಾರೆ. ಸುದೀರ್ಘವಾದ ಪೀಠಿಕೆಯನ್ನೂ ಬರೆದಿದ್ದಾರೆ. ಇದೊಂದು ಅಧ್ಯಯನಶೀಲವಾದ ಮಹತ್ವದ ಅನುವಾದಿತ ಕೃತಿ. ಉಳಿದ ಅನುವಾದಕರಿಗೆ ಮಾದರಿ ಎಂದೇ ನನ್ನ ಅಭಿಪ್ರಾಯ.

**8**

ಹಾಗೆ ಕನ್ನಡ ಭಾಷಾಂತರ ಸಾಹಿತ್ಯ ಸಮೃದ್ಧವಾಗಿದೆ. ಆದರಿಂದ ಕನ್ನಡ ಸಾಹಿತ್ಯ ಶ್ರೀಮಂತವೂ ಆಗಿದೆ. ಈಗ ಕನ್ನಡ ಭಾಷಾಂತರಕಾರರ ಕೋಶ ಹಾಗೂ ಭಾಷಾಂತರ ಚರಿತ್ರೆಯನ್ನು ಸಿದ್ಧಪಡಿಸಬೇಕು. ವಿಜ್ಞಾನ, ತಂತ್ರಜ್ಞಾನ, ಸಂಸ್ಕೃತಿ ಅಧ್ಯಯನ, ನಿರ್ಲಕ್ಷಿತ ಶಾಸ್ತ್ರಗಳ ಅಧ್ಯಯನವನ್ನು ಕೈಗೊಳ್ಳಲು ಕೇಂದ್ರವೊಂದನ್ನು ಸ್ಥಾಪಿಸಿ, ಹೆಚ್ಚು ಹೆಚ್ಚು ಅನುವಾದಕರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿದರೆ, ಭಾಷಾಂತರ ಕ್ಷೇತ್ರದ ಭವಿಷ್ಯ ಉಜ್ವಲವಾಗಬಲ್ಲದು.

ಸುಮಾರು 115 ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಬೆಳಗಾವಿಯಲ್ಲಿ ನೆಲೆಸಿದ್ದಾರೆ.